# ಶ್ರೀಮಾತೆಯವರ ಸ್ಮೃತಿಚಿತ್ರ

ಬಂಗಾಳಿ ಮೂಲ: **ಸ್ವಾಮಿ ಭೂತೇಶಾನಂದ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**



**ನಾ**ನು ವಿದ್ಯಾರ್ಥಿದೆಸೆಯಲ್ಲಿದ್ದಾಗ ಶ್ರೀಮಾತೆಯವರನ್ನು ಮೊದಲ ಬಾರಿ ಭೇಟಿಯಾದೆ. ಬಾಗ್‌ಬಜಾರಿನಲ್ಲಿ ಗಂಗಾನದೀ ತೀರದಲ್ಲೇ ನಾನು ತಿರುಗಾಡಲು ಹೋಗುತ್ತಿದ್ದೆ. ಒಂದು ದಿನ ಅಲ್ಲೊಬ್ಬ ಸಣ್ಣ ಹುಡುಗ ಹಾಡುತ್ತಿದ್ದ. ವಿದ್ಯಾಸಾಗರರ ಶಾಲೆಯ ಒಬ್ಬರು ಅಧ್ಯಾಪಕರೂ ಅಲ್ಲಿದ್ದರು. ಅವರು ನನಗೆ ಕುಳಿತು ಕೊಳ್ಳಲು ಹೇಳಿದರು. ನಾನು ಕುಳಿತೆ. ನನಗೆ ತುಂಬ ಆನಂದ ವುಂಟಾಯಿತು. ಅಲ್ಲೇ ಮುಂದೆ ನಾನು ಜ್ಞಾನ್ ಮಹಾರಾಜರ (ಬ್ರಹ್ಮಚಾರಿ ಜ್ಞಾನ್) ಸಂಪರ್ಕಕ್ಕೆ ಬಂದೆ. ನಾನು ಸ್ನೇಹಿತ ರೊಂದಿಗೆ ಬಾಗ್‌ಬಜಾರಿನಲ್ಲಿದ್ದ ಒಂದು ಸಣ್ಣ ಶಿವಮಂದಿರಕ್ಕೆ ಹೋಗುತ್ತಿದ್ದೆ. ಈಗ ನಮ್ಮ ನಡುವೆ ಆತ್ಮೀಯತೆ ಹೆಚ್ಚು ಗಾಢ ವಾಗಿ ಉಂಟಾಯಿತು. ನಮಗೆಲ್ಲ ಜ್ಞಾನ್ ಮಹಾರಾಜರೇ ಪ್ರೇರಕ ಶಕ್ತಿ ಹಾಗೂ ಮಾರ್ಗದರ್ಶಕರಾಗಿದ್ದರು. ಅವರು ಸ್ವಾಮಿ ವಿವೇಕಾನಂದರ ಶಿಷ್ಯರಾಗಿದ್ದರು. ಜೀವನಪರ್ಯಂತವೂ ಬ್ರಹ್ಮ ಚಾರಿಯಾಗಿ ಉಳಿಯಲು ಸ್ವಾಮೀಜಿ ಅವರಿಗೆ ಆದೇಶ ನೀಡಿ ದ್ದರು. ಜ್ಞಾನ್ ಮಹಾರಾಜರು ನಮ್ಮಂತಹ ಎಳೆಯ ವಯಸ್ಸಿನ ಹುಡುಗರಿಗೆ ಆಧ್ಯಾತ್ಮಿಕ ಮಾರ್ಗವನ್ನು ಹಿಡಿಯಲು ಪ್ರೇರಣೆ ನೀಡುತ್ತಿದ್ದರು; ಅದಕ್ಕೆ ಬೇಕಾದ ಹಾಗೆ ನಾನಾವಿಧವಾಗಿ ಸ್ಫೂರ್ತಿ ಯನ್ನು ತುಂಬುತ್ತಿದ್ದರು.

೧೯೧೮ರ ಡಿಸೆಂಬರ್ ತಿಂಗಳಲ್ಲಿ ಶ್ರೀಮಾತೆಯವರ ಹುಟ್ಟು ಹಬ್ಬದಂದು ಜ್ಞಾನ್ ಮಹಾರಾಜರು ಬಾಗ್‌ಬಜಾರಿನಲ್ಲಿರುವ 'ಶ್ರೀಮಾತೆಯವರ ಮನೆ' ಅಥವಾ 'ಉದ್ಬೋಧನ'ಕ್ಕೆ ನಮ್ಮನ್ನೆಲ್ಲ ಕರೆದುಕೊಂಡು ಹೋದರು. ಆ ಪವಿತ್ರ ದಿನದಂದೇ ಶ್ರೀಮಾತೆ ಯವರ ದರ್ಶನ ಪಡೆದು, ಅವರಿಗೆ ಪ್ರಣಾಮ ಮಾಡುವುದೇ ಉದ್ದೇಶವಾಗಿತ್ತು. ಆಗ ಇಡೀ ದಿನದ ಉತ್ಸವ ಮುಕ್ತಾಯ ಗೊಂಡಿತ್ತು. ಶ್ರೀಮಾತೆಯವರ ಸೇವಕ ರಾಸಬಿಹಾರಿ ಮಹಾ ರಾಜ್ (ಸ್ವಾಮಿ ಅರೂಪಾನಂದರು) ಎರಡನೇ ಅಂತಸ್ತಿನಲ್ಲಿದ್ದ ಶ್ರೀಮಾತೆಯವರ ಕೋಣೆಯ ವರಾಂಡಾದಿಂದ ಹೇಳಿದರು: ''ಇಡೀ ದಿನ ಭಕ್ತರಿಗೆಲ್ಲ ದರ್ಶನ ನೀಡಿ, ಶ್ರೀಮಾತೆಯವರು ಆಯಾಸಗೊಂಡಿದ್ದಾರೆ. ಜ್ಞಾನ್ ಮಹಾರಾಜರು ಮಾತ್ರ ಬಂದು ಶ್ರೀಮಾತೆಯವರಿಗೆ ಪ್ರಣಾಮ ಮಾಡಿ ಹೋಗಬಹುದು.'' ಅದಕ್ಕೆ ಉತ್ತರವಾಗಿ ಜ್ಞಾನ್ ಮಹಾರಾಜ್ ತಿಳಿಸಿದರು, ತಮ್ಮೊಂದಿ ಗಿರುವ ಬಾಲಕರಿಗೆ ಶ್ರೀಮಾತೆಯವರ ದರ್ಶನ ಹಾಗೂ ಪ್ರಣಾಮ ಮಾಡುವ ಅವಕಾಶ ಸಿಗದಿದ್ದರೆ, ಆಗ ತಾವೂ ಶ್ರೀಮಾತೆಯವ ರಿಗೆ ಕೆಳ ಅಂತಸ್ತಿನಿಂದಲೇ ಪ್ರಣಾಮ ಮಾಡಿ ಹೋಗುವರು– ಎಂಬುದಾಗಿ. ಬಹುಶಃ ರಾಸಬಿಹಾರಿ ಮಹಾರಾಜರು ಶ್ರೀಮಾತೆ ಯವರನ್ನು ಕೇಳಿರಬೇಕು ಹಾಗೂ ಅವರ ಆದೇಶದಂತೆ ನಾವೆ ಲ್ಲರೂ ಶ್ರೀಮಾತೆಯವರಿದ್ದ ಎರಡನೇ ಅಂತಸ್ತಿಗೆ ಹೋಗಿ ಅವರ ದರ್ಶನ ಹಾಗೂ ಪ್ರಣಾಮ ಮಾಡಲು ನಮಗೆ ಅವಕಾಶ ಮಾಡಿ ಕೊಟ್ಟರು. ನಾವು ಒಬ್ಬೊಬ್ಬರಾಗಿ ಹೋದೆವು. ಆಗ ಶ್ರೀಮಾತೆ ಯವರು ತಮ್ಮ ಕೋಣೆಯ ಬಾಗಿಲ ಮುಂಭಾಗದಲ್ಲಿ , ತಮ್ಮ ಸ್ವಭಾವಕ್ಕನುಸಾರವಾಗಿ ಪಾದಗಳಿಂದ ತಲೆಯವರೆಗೂ ವಸ್ತ್ರ ವನ್ನು ಹೊದ್ದುಕೊಂಡು ಒಂದು ಕುರ್ಚಿಯಲ್ಲಿ ಕುಳಿತಿದ್ದರು. ಕೇವಲ ಅವರ ಎರಡು ಪಾದಗಳನ್ನು ಹೊರಚಾಚಿಕೊಂಡಿದ್ದರು. ನಮಗೆ ಯಾರಿಗೂ ಶ್ರೀಮಾತೆಯವರ ಮುಖವನ್ನು ನೋಡುವ ಸೌಭಾಗ್ಯವೊದಗಲಿಲ್ಲ, ನಾವೆಲ್ಲರೂ ಅವರ ಪಾದಗಳನ್ನು ಸ್ಪರ್ಶಿಸಿ ಪ್ರಣಾಮ ಮಾಡಿ ಬಂದೆವು. ಆಗ ಅಲ್ಲಿ ಗೋಲಾಪ್–ಮಾ,

ಯೋಗಿನ್ ಮಾ ಹಾಗೂ ಶ್ರೀಮಾತೆಯವರ ಸೇವಕರಾಗಿದ್ದ ರಾಸ ಬಿಹಾರಿ ಮಹಾರಾಜ್ ಇದ್ದರು. ಶ್ರೀಮಾತೆಯವರನ್ನು ಸ್ಥೂಲ ಶರೀರದಲ್ಲಿ ನೋಡುವ ಸೌಭಾಗ್ಯ ನನಗುಂಟಾಗಿದ್ದುದು ಈ ಒಂದು ಸಲ ಮಾತ್ರ. ಇದಾದ ನಂತರ ಶ್ರೀಮಾತೆಯವರು ಜಯ ರಾಮಬಾಟಿಗೆ ಹೋಗಿದ್ದರು. ಸ್ವಾಮಿ ಶಾರದಾನಂದರು ವ್ಯವಸ್ಥೆ ಮಾಡಿದಂತೆ, ಒಂದು ವರ್ಷಕ್ಕೂ ಹೆಚ್ಚು ಕಾಲದ ನಂತರ ಅಂದರೆ, ೧೯೨೦ರ ಫೆಬ್ರವರಿ ತಿಂಗಳ ಕೊನೆಯ ಭಾಗದಲ್ಲಿ ಶ್ರೀಮಾತೆಯವರನ್ನು 'ಉದ್ಬೋಧನ'ಕ್ಕೆ ಕರೆದುಕೊಂಡು ಬಂದರು. ಆಗ ಶ್ರೀಮಾತೆಯವರಿಗೆ ವಿಪರೀತ ಅನಾರೋಗ್ಯ. ಕ್ರಮೇಣ ಅವರ ಆರೋಗ್ಯ ಇನ್ನಷ್ಟು ಹದಗೆಡುತ್ತ ಬಂತು. ಆದ್ದರಿಂದ ನನಗೆ ಮತ್ತೊಂದು ಬಾರಿ ಅವರ ದರ್ಶನ ಪಡೆಯಲಾಗಲಿಲ್ಲ. ಕೊನೆಗೆ, ಅದೇ ವರ್ಷ ಜುಲೈ ೨೧ ರಂದು ಅವರು ಮಹಾ ಸಮಾಧಿಯನ್ನು ಹೊಂದಿದರು. ಅವರ ಮಹಾಸಮಾಧಿಯ ನಂತರ, 'ಉದ್ಬೋಧನ'ದ ಕೆಳ ಅಂತಸ್ತಿನ ಹಜಾರದಲ್ಲಿ ಭಕ್ತ ರೆಲ್ಲರ ದರ್ಶನಕ್ಕಾಗಿ ಅವರ ದೇಹವನ್ನು ಇರಿಸಲಾಗಿತ್ತು. ಈ ಅವಸ್ಥೆಯಲ್ಲೇ ನಾನು ಅವರ ಎರಡನೇ ದರ್ಶನವನ್ನು ಪಡೆದುದು.

ಶ್ರೀಮಾತೆಯವರ ಕಳೇಬರವನ್ನು 'ಉದ್ಬೋಧನ'ದಿಂದ ಬೇಲೂರು ಮಠಕ್ಕೆ ಅಂತ್ಯಕ್ರಿಯೆಗಾಗಿ ಶೋಭಾಯಾತ್ರೆಯೊಂದಿಗೆ ಕರೆತಂದಾಗ, ಆ ಮೆರವಣಿಗೆಯಲ್ಲಿ ನಾವೂ ಪಾಲ್ಗೊಂಡಿದ್ದೆವು. ಸ್ವಾಮಿ ಶಾರದಾನಂದರ ನೇತೃತ್ವದಲ್ಲಿ ನಾವೆಲ್ಲರೂ ಬರಿಗಾಲಿನಲ್ಲಿ ನಡೆಯುತ್ತ 'ಉದ್ಬೋಧನ'ದಿಂದ ಬಾರಾನಗರದ ಕುಟಿಘಾಟ್ ತನಕ ಬಂದೆವು. ಅಲ್ಲಿಂದ ಬೇಲೂರು ಮಠದ ಒಂದು ದೋಣಿ ಯಲ್ಲೇ ಶ್ರೀಮಾತೆಯವರ ದೇಹವನ್ನು ಬೇಲೂರು ಮಠಕ್ಕೆ ಕರೆದುಕೊಂಡು ಹೋದರು. ದೋಣಿಯನ್ನು ನಡೆಸುವವರು ಸ್ವಾಮಿಗಳೇ ಆಗಿದ್ದರು. ಉಳಿದವರೆಲ್ಲರನ್ನೂ ಕರೆದುಕೊಂಡು ಹೋಗಲು ಇನ್ನೊಂದು ದೋಣಿಯನ್ನು ಬಾಡಿಗೆಗೆ ತೆಗೆದು ಕೊಂಡಿದ್ದರು. ಅವುಗಳಲ್ಲಿ ಒಂದರ ಮೂಲಕ ಗಂಗಾನದಿಯನ್ನು ದಾಟಿ ನಾವು ಬೇಲೂರು ಮಠವನ್ನು ತಲುಪಿದೆವು. ಬಾಗ್ ಬಜಾರಿನಿಂದ ಕುಟಿಘಾಟ್ ತನಕ ರಣಬಿಸಿಲಿನಲ್ಲಿ ಬರಿಗಾಲಿನಲ್ಲೇ ನಡೆದದ್ದರಿಂದ ನಮ್ಮಲ್ಲಿ ಅನೇಕರಿಗೆ ಪಾದಗಳಲ್ಲಿ ಗುಳ್ಳೆಗಳೆದ್ದಿ ದ್ದವು. ಹಾಗಿದ್ದರೂ ನಾವು ಶೋಭಾಯಾತ್ರೆಯಲ್ಲಿ ಭಾಗವಹಿಸಿ ದ್ದೆವು. ಅಷ್ಟೊಂದು ಮಂದಿ ಸಾಧು-ಬ್ರಹ್ಮಚಾರಿಗಳು, ಭಕ್ತರು ಗಳು ಶೋಭಾಯಾತ್ರೆಯಲ್ಲಿ ಭಾಗವಹಿಸಿದ್ದನ್ನು ಕಂಡು ನನ್ನ ಮನಸ್ಸಿನಲ್ಲಿ ಒಂದು ಅವರ್ಣನೀಯ ಅನುಭವವುಂಟಾಗಿತ್ತು.

ಸ್ವಾಮೀಜಿಯವರ ಕೋಣೆಯ ದಕ್ಷಿಣ ಭಾಗದಲ್ಲಿ ಸ್ವಾಮಿ ಬ್ರಹ್ಮಾನಂದರು ಸ್ವತಃ ತಮ್ಮ ಕೈಯಿಂದಲೇ ನೆಟ್ಟಿದ್ದ ನಾಗಲಿಂಗ ಮರದ ತನಕವೂ ಬಹುತೇಕ ಗಂಗಾನದಿಯ ತೀರವಿತ್ತು. ಅಲ್ಲಿ ನದೀತೀರವು ಇಳಿಜಾರಾಗಿತ್ತು. ಅಲ್ಲೇ ಶ್ರೀಮಾತೆಯವರ ದೇಹ ವನ್ನು ಇಳಿಸಿದರು. ಅಲ್ಲಿಂದ ಮಾವಿನ ಮರಗಳನ್ನು ಹಾದು, ಮಂದಿರದ (ಹಳೆಯ ಮಂದಿರ) ಮುಂದಿರುವ ಅಂಗಣಕ್ಕೆ ಶ್ರೀಮಾತೆಯವರ ದೇಹವನ್ನು ಒಯ್ಯಲಾಯಿತು — ಅಲ್ಲಿ ಭಕ್ತರೆಲ್ಲರೂ ಅವರ ದರ್ಶನ ಪಡೆಯುವುದಕ್ಕಾಗಿ. ಅನಂತರ ಅಲ್ಲಿಂದ ಶ್ರೀಮಾತೆಯವರ ಈಗಿನ ಮಂದಿರವಿರುವಲ್ಲಿಗೆ ಅವರ ದೇಹವನ್ನು ಕರೆತರಲಾಯಿತು. ಆಗ ಸ್ನಾನಘಟ್ಟವಿರಲಿಲ್ಲ; ಆದರೂ ಅಲ್ಲಿ ಗಂಗಾತೀರವು ಇಳಿಜಾರಿಲ್ಲದೆ ಸಮತಟ್ಟಾಗಿತ್ತು. ಅಲ್ಲಿ ಶ್ರೀಮಾತೆಯವರಿಗೆ ಸ್ನಾನ ಮಾಡಿಸಲಾಯಿತು. ಈಗ ಶ್ರೀಮಾತೆ ಯವರ ಮಂದಿರವಿರುವ ಅದೇ ಸ್ಥಳದಲ್ಲಿ ಕೇವಲ ಶ್ರೀಗಂಧದ ಚಿತೆಯನ್ನು ನಿರ್ಮಿಸಲಾಗಿತ್ತು. ಚಿತಾಗ್ನಿಯನ್ನು ಉರಿಸಲು ಶ್ರೀರಾಮಕೃಷ್ಣರ ಅಣ್ಣನ ಮಗ ರಾಮಲಾಲ ದಾದಾ ಅವರನ್ನು ಆಮಂತ್ರಿಸಲಾಗಿತ್ತು. ಆದರೆ ಅವರಿಗೆ ಬರಲಾಗಲಿಲ್ಲ. ಆದ್ದರಿಂದ ಶಿವು ದಾದಾ (ರಾಮಲಾಲ ದಾದಾ ಅವರ ತಮ್ಮ) ಚಿತಾಗ್ನಿ ಯನ್ನು ಉರಿಸಿದರು.

ಚಿತೆ ಉರಿದ ನಂತರ, ಅದಕ್ಕೆ ಸಾಧುಗಳೊಂದಿಗೆ ಭಕ್ತರೂ ಗಂಗಾಜಲವನ್ನೆರೆದು ಶುದ್ಧೀಕರಿಸಿದರು. ನಾನೂ ಎರೆದೆ. ಬಳಿಕ ಕೆಲವು ಮಂದಿ ಸಾಧುಗಳು ಶ್ರೀಮಾತೆಯವರ ಅಸ್ಥಿಯನ್ನು ಸಂಗ್ರಹಿಸತೊಡಗಿದರು. ಸಾಧುಗಳ ನಂತರ ಭಕ್ತರಲ್ಲೂ ಹಲ ವರು ಸಂಗ್ರಹಿಸತೊಡಗಿದರು. ಆಗ ಸ್ವಾಮಿ ಶಾರದಾನಂದರು ತಮ್ಮ ಸಹಜವಾದ ಗಾಂಭೀರ್ಯವನ್ನು ತ್ಯಜಿಸಿ, ಉಚ್ಚಕಂಠ ದಿಂದ ಹೇಳಿದರು: ''ಯಾರು ಈ ಪವಿತ್ರ ಚಿತಾಭಸ್ಮವನ್ನು ಸಂಗ್ರಹಿಸುವಿರೋ ಅವರೆಲ್ಲ ನೆನಪಿಟ್ಟುಕೊಳ್ಳಿ — ಇದರ ಪವಿತ್ರತೆ ಯನ್ನು ರಕ್ಷಿಸಿಕೊಂಡು ನಿತ್ಯಪೂಜೆಗೆ ವ್ಯವಸ್ಥೆ ಮಾಡದಿದ್ದರೆ ಸರ್ವ ನಾಶವುಂಟಾದೀತು.'' ಅವರು ಹೀಗೆ ಗಂಭೀರ ಧ್ವನಿಯಿಂದ ಹೇಳಿದ ತರ್ಕಬದ್ಧವಾದ ಮಾತುಗಳನ್ನು ಕೇಳಿ ಆತಂಕಗೊಂಡ ಭಕ್ತರಲ್ಲಿ ಕೆಲವರು, ತಾವು ಸಂಗ್ರಹಿಸಿದ ಚಿತಾಭಸ್ಮವನ್ನು ಮತ್ತೆ ಚಿತೆಯಲ್ಲೇ ಹಾಕಿದರು. ಸಾಧುಗಳಲ್ಲಿ ಕೆಲವರು ಚಿತಾಭಸ್ಮವನ್ನು ತಮ್ಮ ಬಳಿಯಲ್ಲೇ ಇಟ್ಟುಕೊಂಡಿರಬೇಕು. ಕಡೇ ಪಕ್ಷ ನನಗೆ ಒಬ್ಬರ ಬಗ್ಗೆ ಗೊತ್ತು, ಅವರ ಬಳಿ ಶ್ರೀಮಾತೆಯವರ ಚಿತಾಭಸ್ಮ ವಿತ್ತು. ಅವರೇ ಗಿರಿಜಾ ಮಹಾರಾಜ್ (ಸ್ವಾಮಿ ಗಿರಿಜಾನಂದ). ಅವರು ಶ್ರೀಮಾತೆಯವರ ಚಿತಾಭಸ್ಮಕ್ಕೆ ನಿತ್ಯಪೂಜೆ ಮಾಡು ತ್ತಿದ್ದರು. ಹೊರಗೆ ಎಲ್ಲಾದರೂ ಹೋದಾಗ, ಎಲ್ಲೆಲ್ಲಿ ಪೂಜೆಯ ಉಪಕರಣಗಳು ಲಭ್ಯವಿರಲಿಲ್ಲವೋ, ಅಲ್ಲೆಲ್ಲ ಅವರು ತುಳಸೀಪತ್ರೆ ಯನ್ನು ಅರ್ಪಿಸುತ್ತಿದ್ದರು. ❖

**''ದೇವರ ಮೇಲೆ ಮನಸ್ಸನ್ನು ಇಡದಿದ್ದರೆ ಪರಿಶುದ್ಧರಾಗಲು ಸಾಧ್ಯವಿಲ್ಲ. ಮಹಾಮಾಯೆ ಹಲವು ವಿಧದಲ್ಲಿ ಆಡುವಳು. ಅವಳು ಸೃಷ್ಟಿಸುವ ಮಹಾ ಪ್ರಲೋಭನೆಯ ಆಕರ್ಷಣೆಗೆ ಬೀಳದೆ ಇರುವುದು ಬಹಳ ಕಷ್ಟ. ಇದರಿಂದ ಪಾರಾಗುವುದು ಮಕ್ಕಳಾಟ ವಲ್ಲ. ಭಗವಂತನ ಶಕ್ತಿಯಿಂದ ಮಾತ್ರ ಮಹಾಮಾಯೆಯ ಮೋಹದಿಂದ ಪಾರಾಗಿ ಮುಕ್ತರಾಗಲು ಸಾಧ್ಯ. ಮತ್ತಾವುದರ ಸಹಾಯದಿಂದಲೂ ಅಲ್ಲ.''** — ಸ್ವಾಮಿ ಬ್ರಹ್ಮಾನಂದ